# ರಾಜನನ್ನು ಮತ್ತೆ ಹೊತ್ತುಬಂದ ಪಾಸ್‌ಪೋರ್ಟ್

ಬ್ರಿಟಿಷ್ ಸಾಮ್ರಾಜ್ಯದ ಮುಖ್ಯಸ್ಥರಾಗಿರುವ ರಾಜ ಅಥವಾ ರಾಣಿಗೆ ಪಾಸ್‌ಪೋರ್ಟ್ ಇರುವುದಿಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಅವರಿಗೆ ಪಾಸ್‌ಪೋರ್ಟ್ ಇಲ್ಲದೆಯೇ ಮುಕ್ತ ಪ್ರವೇಶವಿದೆ. ಆದರೆ, ಇಂಗ್ಲೆಂಡ್‌ನ ಪ್ರಜೆಗಳಿಗೆ ವಿತರಣೆಯಾಗುವ ಪಾಸ್‌ಪೋರ್ಟ್‌ಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪರವಾಗಿ, ಸಿಂಹಾಸನವೇರಿದ ರಾಜ ಅಥವಾ ರಾಣಿಯ ಪರವಾಗಿ ಬೇರೆ ದೇಶಗಳ ಮುಖ್ಯಸ್ಥರಿಗೆ ಸಾಮಾನ್ಯವಾದ ವಿನಂತಿಯೊಂದು ಪಾಸ್‌ಪೋರ್ಟ್‌ನಲ್ಲಿ ಇರುತ್ತದೆ. ರಾಣಿ ಎರಡನೇ ಎಲಿಜಬೆತ್ ಅಧಿನಾಯಕಿಯಾಗಿದ್ದ ಏಳು ದಶಕಗಳ ಅವಧಿಯಲ್ಲಿ, 'ಈ ಪಾಸ್‌ಪೋರ್ಟ್ ಹೊಂದಿದ ವ್ಯಕ್ತಿಗೆ ಯಾವುದೇ ಅಡಚಣೆಯಿಲ್ಲದೆ ಮುಕ್ತವಾಗಿ ಓಡಾಡಲು ಅವಕಾಶ ನೀಡುವಂತೆ, ಅಗತ್ಯ ಸಹಾಯ ಹಾಗೂ ರಕ್ಷಣೆ ನೀಡುವಂತೆ ಬ್ರಿಟಿಷ್ ಸಾಮ್ರಾಜ್ಯದ ರಾಣಿಯ ಪರವಾಗಿ (Her Majesty) ಸಾಮ್ರಾಜ್ಯ ಹಾಗೂ ಸರ್ಕಾರದ ಕಾರ್ಯದರ್ಶಿಯವರು ವಿನಂತಿಸುತ್ತಾರೆ' ಎಂಬ ಒಕ್ಕಣಿಕೆಯೇ ಇರುತ್ತಿತ್ತು. ಆದರೆ, ರಾಣಿ ತೀರಿಹೋಗಿದ್ದರಿಂದ ಅವರ ಪುತ್ರ ಮೂರನೇ ಚಾರ್ಲ್ಸ್ ಈಗ ರಾಜನಾಗಿದ್ದಾರೆ. ಹೀಗಾಗಿ ಬ್ರಿಟನ್ ಆಡಳಿತ ಪಾಸ್‌ಪೋರ್ಟ್‌ನಲ್ಲಿ ಬದಲಾವಣೆ ಮಾಡಿದೆ. ಹೀಗಾಗಿ ಇಂಗ್ಲೆಂಡ್‌ನ ಪಾಸ್‌ಪೋರ್ಟ್ ಈಗ ಹೊಸ ಅವತಾರ ತಾಳಿ ಸೆಲೆಬ್ರಿಟಿಯಂತೆ ಬೀಗುತ್ತಿದೆ.




ರಾಣಿಯ ಪರವಾಗಿ ಎಂಬ ಪದ ಪಾಸ್‌ಪೋರ್ಟ್‌ನಿಂದ ಕಾಣೆಯಾಗಿದ್ದು, ರಾಜನ ಪರವಾಗಿ (His Majesty) ಎಂಬ ಪದ ಮತ್ತೆ ಸೇರಿಕೊಂಡಿದೆ. 1952ರಲ್ಲಿ ರಾಣಿ ಪಟ್ಟಕ್ಕೆ ಏರಿದ ಮೇಲಿನಿಂದ ಇದುವರೆಗೆ Her Majesty ಎಂಬ ಒಕ್ಕಣೆಯನ್ನು ಅಲ್ಲಿನ ಪಾಸ್‌ಪೋರ್ಟ್ ತಪ್ಪದೇ ಹೊಂದಿರುತ್ತಿತ್ತು. ಅದಕ್ಕಿಂತ ಮೊದಲು ರಾಜನ ಹೆಸರಿನಲ್ಲೇ ಪಾಸ್‌ಪೋರ್ಟ್ ವಿತರಣೆ ಆಗುತ್ತಿತ್ತು. ಈ ಅವಧಿಯಲ್ಲಿ ಪಾಸ್‌ಪೋರ್ಟ್ ಪಡೆದಿದ್ದ ಬ್ರಿಟಿಷ್ ಪ್ರಜೆಗಳು ಐತಿಹಾಸಿಕ ಸ್ಥಿತ್ಯಂತರಕ್ಕೆ ಸಾಕ್ಷಿಯಾಗಿದ್ದು, ಹೊಸ ಪಾಸ್‌ಪೋರ್ಟ್ ಇಂಗ್ಲೆಂಡ್‌ನಲ್ಲಿ ಸಂಚಲನ ಮೂಡಿಸಿದೆ.

**ಪ್ರವೀಣ ಕುಲಕರ್ಣಿ**

ಇಷ್ಟಕ್ಕೂ ಪಾಸ್‌ಪೋರ್ಟ್ ಅಂದರೆ ಒಂದು ಪ್ರವಾಸಿ ದಾಖಲೆಯಷ್ಟೇ ಎಂದು ಅಸಡ್ಡೆ ತೋರಬೇಡಿ. ಆ ದಾಖಲೆಯನ್ನು ಹೊಂದಿದ ವ್ಯಕ್ತಿಯ ರಾಷ್ಟ್ರೀಯತೆಯನ್ನೂ ಅದು ಸಾರುತ್ತದೆ. ಭಾರತದಲ್ಲಿ ರಾಷ್ಟ್ರಪತಿಯವರ ಹೆಸರಿನಲ್ಲಿ ಆಡಳಿತ ನಡೆಯುವಂತೆ, ಇಂಗ್ಲೆಂಡ್‌ನಲ್ಲಿ ಬ್ರಿಟನ್ ಸಾಮ್ರಾಟನ ಪರವಾಗಿ ಆಡಳಿತ ನಡೆಯುತ್ತದೆ. ಹೀಗಾಗಿ ಅಲ್ಲಿ ವಿತರಣೆಯಾಗುವ ಪಾಸ್‌ಪೋರ್ಟ್‌ನಲ್ಲಿ Her Majesty ಅಥವಾ His Majesty ಎಂಬ ಒಕ್ಕಣೆ ಇರುವುದು ಸಂಪ್ರದಾಯ.

ಬ್ರಿಟನ್ನಿನ ಪಾಸ್‌ಪೋರ್ಟ್ ಚರಿತ್ರೆಯೇ ರೋಚಕವಾಗಿದೆ. ಸ್ವತಃ ರಾಜ ಅಥವಾ ರಾಣಿ ಪಾಸ್‌ಪೋರ್ಟ್ ವಿತರಣೆ ಮಾಡುವುದರಿಂದ ಅವರು ಈ ದಾಖಲೆಯನ್ನು ಹೊಂದುವಂತಿಲ್ಲ. ಆದರೆ, ರಾಜಮನೆತನದ ಉಳಿದೆಲ್ಲ ಸದಸ್ಯರೂ ಕಡ್ಡಾಯವಾಗಿ ಪಾಸ್‌ಪೋರ್ಟ್ ಅನ್ನು ಹೊಂದಿರುತ್ತಾರೆ. 1414ರಲ್ಲಿ ನಾಲ್ಕನೇ ಹೆನ್ರಿ ಅವರಿಗೆ ವಿತರಿಸಲಾದ ಪಾಸ್‌ಪೋರ್ಟ್, ಆ ದೇಶದ ಮೊದಲ ಅಂತಹ ದಾಖಲೆ ಎಂಬ ಹಿರಿಮೆಗೆ ಪಾತ್ರವಾಗಿದ್ದು, ಈಗಲೂ ಅಲ್ಲಿನ ಸರ್ಕಾರಿ ಸಂಗ್ರಹದಲ್ಲಿದೆ. ಅಂದರೆ, ಹೊರದೇಶಗಳಿಗೆ ಹೋಗುವ ಪ್ರವೃತ್ತಿ ಇಂಗ್ಲೆಂಡ್‌ನಲ್ಲಿ ಹೆಚ್ಚಾಗಿ ಶುರುವಾದ ಕಾಲವದು ಎಂದು ಅರ್ಥೈಸಬಹುದು. ಬ್ರಿಟಿಷ್ ಲೈಬ್ರರಿಯಲ್ಲಿರುವ ಇಂತಹ ಅನನ್ಯವಾದ ಪಾಸ್‌ಪೋರ್ಟ್‌ಗಳ ಮೇಲೆ ಕಣ್ಣಾಡಿಸಿದರೆ ರೋಚಕ ಕಥಾಸರಣಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ದ್ವಿತೀಯ ಜಾಗತಿಕ ಯುದ್ಧದ ಸಮಯದಲ್ಲಿ ರಾಷ್ಟ್ರೀಯ ಗುರುತಿನ ಚೀಟಿ ನೀಡುವ ಪರಿಪಾಟವನ್ನೂ ಆರಂಭಿಸಲಾಗಿತ್ತು. ವಿಪ್ಲವದ ಸನ್ನಿವೇಶದಲ್ಲಿ ತಮ್ಮ ದೇಶದ ಪ್ರಜೆಗಳನ್ನು ಸುಲಭವಾಗಿ ಗುರುತಿಸಲು ಅಲ್ಲಿನ ಸರ್ಕಾರ ಮಾಡಿಕೊಂಡ ವ್ಯವಸ್ಥೆ ಅದಾಗಿತ್ತು. ಈ ಚೀಟಿ ಒಂದು ವಿಧದಲ್ಲಿ ಪಾಸ್‌ಪೋರ್ಟ್‌ಗೆ ಪರ್ಯಾಯವಾಗಿ ಬಳಕೆಯಾಗುತ್ತಿತ್ತು.

ಹೊಸಕಾಲದ ಮೊದಲ ಪಾಸ್‌ಪೋರ್ಟ್ ವಿತರಣೆಯಾಗಿದ್ದು 1915ರಲ್ಲಿ. ಆ ವೇಳೆಗೆ, ಭಾವಚಿತ್ರ, ಸಹಿಯನ್ನೂ ಅಲ್ಲಿನ ಪಾಸ್‌ಪೋರ್ಟ್ ಒಳಗೊಂಡಿತ್ತು. ಈ ದಾಖಲೆಗೆ ಭದ್ರತಾ ದೃಷ್ಟಿಯಿಂದ ಹಲವು ಬದಲಾವಣೆ ಮಾಡಿ, ವಾಟರ್ ಮಾರ್ಕ್ ಅಳವಡಿಕೆಯನ್ನೂ ಕಡ್ಡಾಯಗೊಳಿಸಿದ್ದು 1972ರಲ್ಲಿ. ಮುಂದೆ ಹಾಲೋ ಗ್ರಾಮ್ ಬಂತು. ಮುದ್ರಣದಲ್ಲೂ ಹಲವು ಬದಲಾವಣೆ ಮಾಡುತ್ತಾ ಬರಲಾಯಿತು. ಇದೀಗ ಪಾಲಿಕಾರ್ಬೋನೇಟ್‌ನಲ್ಲಿ ಪಾಸ್‌ಪೋರ್ಟ್ ಮುದ್ರಿಸಲಾಗುತ್ತದೆ.

1988ರಲ್ಲಿ ಪಾಸ್‌ಪೋರ್ಟ್‌ಅನ್ನು ಕೆಂಪು ಬಣ್ಣದಲ್ಲಿ ಮುದ್ರಿಸುವ ಪರಿಪಾಟ ಆರಂಭಿಸಲಾಯಿತು. ಮೂರು ದಶಕಗಳ ಬಳಿಕ ಪಾಸ್‌ಪೋರ್ಟ್‌ನ ಬಣ್ಣ ಕೆಂಪುಬಣ್ಣದಿಂದ ನೀಲಿ ಬಣ್ಣಕ್ಕೆ ಬದಲಾಯಿತು. ಅದು ಇಂಗ್ಲೆಂಡ್, ಯೂರೋಪ್ ಒಕ್ಕೂಟದಿಂದ ಹೊರಬಂದುದರ ಸಂಕೇತವಾಗಿತ್ತು. ಇದೀಗ ಬಯೊಮೆಟ್ರಿಕ್ ಮೂಲಕ ಗುರುತಿಸಲು ಸಾಧ್ಯವಿರುವ ಪಾಸ್‌ಪೋರ್ಟ್‌ಗಳು ಸಹ ವಿತರಣೆಯಾಗುತ್ತಿತ್ತು. ಕಾಲನ ಕುಲುಮೆಯಲ್ಲಿ ರೂಪಾಂತರ ಹೊಂದುತ್ತಾ ಬಂದಿರುವ ಇಂಗ್ಲೆಂಡ್‌ನ ಪಾಸ್‌ಪೋರ್ಟ್ ಈಗ ಮತ್ತೊಂದು ಮಜಲಿಗೆ ತೆರೆದುಕೊಂಡಿದೆ. ಅಂದಹಾಗೆ, ಈ ಪಾಸ್‌ಪೋರ್ಟ್ ಇದ್ದವರಿಗೆ ಜಗತ್ತಿನ 188 ರಾಷ್ಟ್ರಗಳಿಗೆ ಪ್ರವೇಶವಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65